ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಶಾಸನಬದ್ಧ ಸಹಕಾಲಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560055, Ph : 080-23378375-80, website : www.souharda.coop
Email : souharda@souharda.coop

ಸಂಖ್ಯೆ:ಸಂಸ/ತ&ಶಿ.ವಿ/2026-27/0972 ದಿನಾಂಕ : 27.10.2026

ಇವರಿಗೆ,
ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು,
ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು.

ಮಾನ್ಯರೇ,

ವಿಷಯ: ಸೌಹಾರ್ದ ಸಹಕಾರಿಗಳು ತಮ್ಮ ಸಿಬ್ಬಂದಿಗಳನ್ನು 25ನೇ ತಂಡದ 10 ದಿನಗಳ "ವ್ಯಕ್ತಿತ್ವ ವಿಕಸನ ತರಬೇತಿ"ಗೆ ಅಭ್ಯರ್ಥಿಗಳಾಗಿ ಕಳುಹಿಸುವ ಕುರಿತು.

ಉಲ್ಲೇಖ: ದಿನಾಂಕ 24.02.2026ರಂದು ನಡೆದ ಆಡಳಿತ ಮಂಡಲಿ ಸಭೆಯ 33ರಲ್ಲಿ ಅನುಮೋದಿಸಿರುವಂತೆ.

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ, ನೇತಾರನಾಗಿ ಈ ಸೌಹಾರ್ದ ಕ್ಷೇತ್ರದ ಅಭಿವೃದ್ಧಿಗಾಗಿ ಶಾಸನಬದ್ಧ ಕಾರ್ಯಗಳ ನಿರ್ವಹಣೆಯ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಲವಾರು ರೀತಿಯ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ದೀರ್ಘಾವಧಿ ತರಬೇತಿಯನ್ನು ಆಯೋಜಿಸುತ್ತಾ ಬಂದಿದೆ. ಈಗಾಗಲೇ ಹುಲಕೋಟಿ, ಕುಪ್ಪಳ್ಳಿ, ಕೆಮ್ಮಣ್ಣುಗುಂಡಿ, ಮೈಸೂರು, ಧಾರವಾಡ, ಹಂಪಿ, ಹೆಗ್ಗೋಡು, ಗುರುವಾಯನಕೆರೆ, ಯಲ್ಲಾಪುರ, ಕಮಲಾಪುರ, ಬೆಂಗಳೂರು, ಕೂಡಲಸಂಗಮ, ಶ್ರೀರಂಗಪಟ್ಟಣ, ಕೃಷಿವಿಶ್ವವಿದ್ಯಾಲಯ ರಾಯಚೂರು, ಒಡಿಯೂರು ಈ ಸ್ಥಳಗಳಲ್ಲಿ ನಡೆಸಿದ್ದು, ತರಬೇತಿ ಕಾರ್ಯಕ್ರಮಗಳು ಬಹಳ ಪ್ರಯೋಜನಕಾರಿಯಾಗಿತ್ತೆಂದು, ಸಿಬ್ಬಂದಿಗಳ ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಅವಕಾಶವಾಗಿತ್ತೆಂದು ಶಿಬಿರಾರ್ಥಿಗಳು ಹಾಗೂ ಅತಿಥಿ ಗಣ್ಯರು ಅಭಿಪ್ರಾಯ ನೀಡಿದ್ದಾರೆ. **ಪ್ರಸ್ತುತ 25ನೇ ತಂಡದ ತರಬೇತಿ ಕಾರ್ಯಕ್ರಮವನ್ನು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಯಾದವಗಿರಿ, ಮೈಸೂರು ಇಲ್ಲಿ ದಿನಾಂಕ 10 ರಿಂದ 19 ಡಿಸೆಂಬರ್ 2026ರ ವರೆಗೆ ನಡೆಸಲು ತೀರ್ಮಾನಿಸಲಾಗಿದೆ.** ತರಬೇತಿ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ.

ತರಬೇತಿ ವಿಷಯಗಳು

- ಸಹಕಾರ - ಸಹಕಾರ ಸಂಘ, ಸಹಕಾರ ತತ್ವಗಳು, ಸಹಕಾರ ಕಾಯ್ದೆಗಳು, ಸಹಕಾರ ಚಳುವಳಿಯ ಹುಟ್ಟು ಬೆಳವಣಿಗೆ, ಸಾಧನೆಗಳು.
- ಸೌಹಾರ್ದ ಸಹಕಾರಿ ಕಾಯ್ದೆ-1997ರ ಆಶಯ, ಹುಟ್ಟು, ಬೆಳವಣಿಗೆ, ಸಹಕಾರ ಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆ ವ್ಯತ್ಯಾಸಗಳು, ಕಾಯ್ದೆಯ ಮುಖ್ಯಾಂಶಗಳು, ಸೌಹಾರ್ದ ಸಹಕಾರಿಗಳ ಉಪವಿಧಿಗಳು ತಿದ್ದುಪಡಿ ವಿಧಾನ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು, ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು.
- ಕಛೇರಿ ಆಡಳಿತ ನಿರ್ವಹಣೆ, ಕಡತಗಳ ನಿರ್ವಹಣೆ, ಸಮಯ ಪಾಲನೆ, ಸೌಹಾರ್ದ ಸಹಕಾರಿಗಳ ಆಡಳಿತ ನಿರ್ವಹಣೆ.
- ಸಭೆಗಳು - ಆಡಳಿತ ಮಂಡಲಿ ಸಭೆ, ವಾರ್ಷಿಕ ಸಾಮಾನ್ಯ ಸಭೆ, ವಿಶೇಷ ಸಭೆ - ಪ್ರಾಯೋಗಿಕ-1.
- ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ, ಜಮಾ-ಖರ್ಚು, ಲಾಭ-ನಷ್ಟ, ಖಾತೆ, ಆಸ್ತಿ-ಜವಾಬ್ದಾರಿ ತಖ್ತೆಃ ಬ್ಯಾಂಕ್ ಸಮನ್ವಯ ಪಟ್ಟಿ (Balance sheet)ಸಿದ್ಧಪಡಿಸುವುದು ಹಾಗೂ ವಿಶ್ಲೇಷಿಸುವುದು. -ಪ್ರಾಯೋಗಿಕ-2.
- ಹಣಕಾಸಿನ ನಿರ್ವಹಣೆ, ಸಂಪನ್ಮೂಲಗಳ ಕ್ರೂಢೀಕರಣ ಹಾಗೂ ಲಾಭದಾಯಕ ಹೂಡಿಕೆ, ಬಡ್ಡಿಯೇತರ ಆದಾಯಗಳು, ಸಾಲಗಳ ನಿರ್ವಹಣೆ, ಗುಣಮಟ್ಟಗಳ ಸಾಲ ನೀಡಿಕೆ.
- ದಾವಾ ಪ್ರಕರಣ ಕಡತಗಳ ದಾಖಲಾತಿ, ಸಾಲ ವಸೂಲಾತಿ ಕ್ರಮಗಳು ಹಾಗೂ ಅಮಲ್ದಾರಿ ವಿಭಾಗದಲ್ಲಿ ಮಾರಾಟಗಾರನ ಕರ್ತವ್ಯಗಳು.
- ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿದ್ಯಮಾನ ವಿಷಯಗಳು.
- ಕೃತಕ ಬುದ್ಧಿಮತ್ತೆ (AI) ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಮತ್ತು ಬ್ಯಾಂಕಿಂಗ್ ಹಾಗೂ ಸಹಕಾರ ಕ್ಷೇತ್ರದಲ್ಲಿ ಅವುಗಳ ಪರಿಣಾಮಕಾರಿ ಬಳಕೆ.

- ಸೋಷಿಯಲ್ ಮೀಡಿಯಾ ಬಳಕೆ ಹಾಗೂ ಸಹಕಾರ ಕ್ಷೇತ್ರದಲ್ಲಿ ಸೈಬರ್ ಕ್ರೈಮ್ ನಿಯಂತ್ರಣದ ಕ್ರಮಗಳು.
- ಜಿಎಸ್‌ಟಿ, ಆದಾಯ ತೆರಿಗೆ ಹಾಗೂ ಅನ್ವಯವಾಗುವ ವಿವಿಧ ತೆರಿಗೆ ಕಾಯ್ದೆಗಳು.
- ಗ್ರಾಹಕ ಸೇವೆಗಳ ನಿರ್ವಹಣೆ ವ್ಯವಹಾರ ಅಭಿವೃದ್ಧಿ ಯೋಜನೆಗಳು.
- ಸಿಬ್ಬಂದಿಗಳ ಕಾರ್ಯಗಳ ಒತ್ತಡ ನಿರ್ವಹಣೆ, ವ್ಯಕ್ತಿತ್ವ ವಿಕಸನ, ಮಾನವೀಯ ಮೌಲ್ಯಗಳ ನಿರ್ವಹಣೆ.
- ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಇತರೆ ಮಹತ್ವದ ಅಗತ್ಯ ವಿಷಯಗಳು.

ತರಬೇತಿ ಅವಧಿಯಲ್ಲಿ ಪಠ್ಯ ಕ್ರಮದಂತೆ ಪ್ರತಿ ದಿನ ಯೋಗ, ಸಾಮೂಹಿಕ ಕಾರ್ಯಕ್ರಮಗಳು, ಪ್ರಾಯೋಗಿಕಗಳು, ಉತ್ತಮ ಸಹಕಾರಿ ಸಂಸ್ಥೆಗಳಿಗೆ ಭೇಟಿ ವ್ಯವಸ್ಥೆ ಇರುತ್ತದೆ.

ಸೌಹಾರ್ದ ಸಹಕಾರಿಗಳು ಅಭಿವೃದ್ಧಿಯ ದೃಷ್ಟಿಯಿಂದ ಇಂತಹ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತಮ್ಮ ಸಹಕಾರಿಯ ಸಿಬ್ಬಂದಿಗಳನ್ನು ಕಳುಹಿಸುವುದು ಅಗತ್ಯವಿರುತ್ತದೆ. ಸದರಿ ತರಬೇತಿಯಲ್ಲಿ 60 ಜನರಿಗೆ ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಅರ್ಜಿಯನ್ನು ಸಲ್ಲಿಸಿದ 60 ಸಿಬ್ಬಂದಿಯವರಿಗೆ ಆದ್ಯತೆ ನೀಡಲಾಗುವುದು. ಭಾಗವಹಿಸುವವರ ಸಂಖ್ಯೆ ನಿಗದಿತ ಸಂಖ್ಯೆಗಿಂತ ಹೆಚ್ಚಾದಲ್ಲಿ ಮುಂದಿನ ತಂಡದಲ್ಲಿ ತರಬೇತಿಗೆ ಅವಕಾಶ ಮಾಡಿಕೊಡಲಾಗುವುದು. ಸಿಬ್ಬಂದಿಗಳು ತರಬೇತಿಯನ್ನು ಪಡೆದಿರುವುದಕ್ಕೆ ಪ್ರಮಾಣ ಪತ್ರ ನೀಡಲಾಗುವುದು.

ಸೌಹಾರ್ದ ಸಹಕಾರಿಗಳು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅರ್ಜಿಯ ಜೊತೆಗೆ ತಮ್ಮ ಸಹಕಾರಿಯಿಂದ ಭಾಗವಹಿಸುವ ಅಭ್ಯರ್ಥಿಗಳ ತರಬೇತಿ ಶುಲ್ಕ ಹಾಗೂ ಪ್ರಯಾಣ ವೆಚ್ಚವನ್ನು ಭರಿಸಬೇಕು. ನೋಂದಾವಣೆ ಅರ್ಜಿ ನಮೂನೆಯಲ್ಲಿ, ತಾವು ಕಳುಹಿಸುವ ಅಭ್ಯರ್ಥಿಗಳ ಹೆಸರು, ವಿಳಾಸ, ನಿರ್ವಹಿಸುತ್ತಿರುವ ಹುದ್ದೆ, ಇತ್ಯಾದಿ ವಿವರಗಳನ್ನು ಪ್ರತ್ಯೇಕವಾಗಿ ಭರ್ತಿ ಮಾಡಿ ಶೀಘ್ರವಾಗಿ ಕಳುಹಿಸಿ ನಿಮ್ಮ ಸ್ಥಾನ ಕಾಯ್ದಿರಿಸಿಕೊಳ್ಳಲು ತಿಳಿಸಿದೆ. ತರಬೇತಿಗೆ ಹಾಜರಾಗಲು ನೋಂದಾಯಿಸಿದ ಪ್ರತಿನಿಧಿಗಳಿಗೆ ಪ್ರವೇಶ ಪತ್ರವನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ತರಬೇತಿ ಅಧಿಕಾರಿಗಳಾದ ಶ್ರೀ ಚಂದ್ರಶೇಖರಯ್ಯ.ಎಂ (8884460266), ಶ್ರೀ ಬಾಬು ಎಂ ಪಠಾಣ (9364702063) ಸಂಪರ್ಕಿಸಲು ಕೋರಿದೆ.

-: ತರಬೇತಿ ಕಾರ್ಯಕ್ರಮದ ವಿವರಗಳು : -

- **ಭಾಗವಹಿಸುವ ವರ್ಗ** : ಮುಖ್ಯಕಾರ್ಯನಿರ್ವಾಹಕರು, ಕಾರ್ಯದರ್ಶಿಗಳು, ಅಧಿಕಾರಿಗಳು.
- **ತರಬೇತಿಯ ಅವಧಿ** : 10 ದಿನಗಳಲ್ಲಿ - 8 ದಿನಗಳು ಒಳಾಂಗಣ ತರಬೇತಿ, 2 ದಿನಗಳು ಪ್ರಾಯೋಗಿಕ ತರಬೇತಿ ಮತ್ತು ಸ್ಥಳೀಯ ಸಹಕಾರ ಸಂಸ್ಥೆಗಳ ಅಧ್ಯಯನ ಪ್ರವಾಸ.
- **ತರಬೇತಿ ನಡೆಯುವ ಸ್ಥಳ:** ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಯಾದವಗಿರಿ, ಮೈಸೂರು.
- **ತರಬೇತಿ ಸೌಲಭ್ಯ** : ಉಪಹಾರ, ಊಟ-ವಸತಿ, ಅಧ್ಯಯನ ಸಾಹಿತ್ಯ, ಯೋಗ ತರಬೇತಿ, ಹಾಗೂ ಉತ್ತಮ ಸಹಕಾರಿ/ಸಂಸ್ಥೆಗಳಿಗೆ ಅಧ್ಯಯನ ಭೇಟಿ. (ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ.)
- **ವ್ಯವಸ್ಥೆ ನಿರ್ವಹಣೆ ಶುಲ್ಕ:** ರೂ. 6,000/- + 18% ಜಿಎಸ್‌ಟಿ ಸೇರಿ ಒಟ್ಟು ಮೊತ್ತ ರೂ.7,080/- (ಊಟ, ವಸತಿ ವ್ಯವಸ್ಥೆಗಳಿಗಾಗಿ) ಶುಲ್ಕವನ್ನು ಸೌಹಾರ್ದ ಸಹಕಾರಿಯಿಂದ ಭರಿಸಬೇಕು.
- **ಅಭ್ಯರ್ಥಿಗಳ ಸಂಖ್ಯೆ** : 60 ಮಾತ್ರ

ತರಬೇತಿಯ ದಿನಾಂಕ : **10.12.2026 ರಿಂದ 19.12.2026** ತರಬೇತಿಯ ನೋಂದಣಿ ಶುಲ್ಕವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಹೆಸರಿನಲ್ಲಿ ಚೆಕ್/ಡಿಡಿಯನ್ನು ಪಡೆದು ಅಗತ್ಯ ದಾಖಲೆಗಳನ್ನು ಸಂಯುಕ್ತ ಸಹಕಾರಿ ಕೇಂದ್ರ ಕಛೇರಿಗೆ ಕಳುಹಿಸುವುದು. **ನೋಂದಾವಣೆಗೆ ಕೊನೆಯ ದಿನಾಂಕ: 20.11.2026.**

ವಂದನೆಗಳೊಂದಿಗೆ,

Karnataka State Souharda Federal Co-operative Ltd. Reg. No. RSR/SOU/AGM 136/ Regn. 051/2001-02 dated: 04-01-2002 Bengaluru

ತಮ್ಮ ವಿಶ್ವಾಸಿ,

(ಶರಣಗೌಡ ಜಿ.ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

ಲಗತ್ತು : ತರಬೇತಿಯ ನೋಂದಣಿ ಅರ್ಜಿ ಲಗತ್ತಿಸಲಾಗಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop

ನೋಂದಾವಣೆ ಅರ್ಜಿ

25ನೇ ತಂಡದ 10 ದಿನಗಳ "ವ್ಯಕ್ತಿತ್ವ ವಿಕಸನ ತರಬೇತಿ" ಕಾರ್ಯಕ್ರಮ

ಇತ್ತೀಚಿನ ಭಾವಚಿತ್ರ

ಸಹಕಾರಿಯ ಹೆಸರು ಹಾಗೂ ವಿಳಾಸ :

ಭಾಗವಹಿಸುವ ಪ್ರತಿನಿಧಿಯ ಹೆಸರು ಹಾಗೂ ವಿಳಾಸ :

ಜನ್ಮ ದಿನಾಂಕ :

ವಿದ್ಯಾರ್ಹತೆ :

ಸಹಕಾರಿಯಲ್ಲಿ ನಿರ್ವಹಿಸುತ್ತಿರುವ ಹುದ್ದೆ :

ಅನುಭವ :

ದೂರವಾಣಿ ಸಂಖ್ಯೆ :

ಇ-ಮೇಲ್ ಐಡಿ :

ಈ ಹಿಂದೆ ಭಾಗವಹಿಸಿದ್ದ ತರಬೇತಿ ವಿವರ :

ಆಸಕ್ತಿಕರ ವಿಷಯಗಳು :

ತರಬೇತಿ ಶುಲ್ಕ ಪಾವತಿಸಿರುವ ವಿವರ

ಬ್ಯಾಂಕ್ ಹೆಸರು ಮತ್ತು ಶಾಖೆ : ----------

ರೂ.ಗಳು : ----------

ಡಿ.ಡಿ. /ಚೆಕ್ ನಂ : ----------

ದಿನಾಂಕ : ----------

ಸಂಯುಕ್ತ ಸಹಕಾರಿಯ ತರಬೇತಿ ನಿಯಮಗಳಿಗೆ ಬದ್ಧನಾಗಿರುತ್ತೇನೆ.

ಸಹಕಾರಿಯ ಮೊಹರು

ಭಾಗವಹಿಸುವ ಪ್ರತಿನಿಧಿಯ ಸಹಿ

ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರ ಸಹಿ